## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ    **2015–16ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಕುರಿತು.**

ಓದಲಾಗಿದೆ
1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 35 ಜೈಅಯೋ 2015, ದಿನಾಂಕ 18.05.2015, 06.08.2015 ಮತ್ತು 16.12.2015
2. ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಬಿಡಿಬಿ ರವರ ಪತ್ರ ದಿನಾಂಕ 21.12.2015 & 23.01.2016

**ಪ್ರಸ್ತಾವನೆ :**

**2015–16ನೇ** ಸಾಲಿನಲ್ಲಿ ರಾಜ್ಯ ಆಯವ್ಯಯದಡಿ **ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ರೂ.150.00 ಲಕ್ಷಗಳನ್ನು** ಕರ್ನಾಟಕ ಜೈವಿಕ ಇಂಧನ ನೀತಿ ಅನುಷ್ಠಾನಕ್ಕಾಗಿ ಒದಗಿಸಿದ್ದು, ಈ ಪೈಕಿ ಈಗಾಗಲೇ ಮೇಲೆ (1)ರ ಆದೇಶಗಳಲ್ಲಿ ಓದಲಾದಂತೆ **ರೂ.112.50 ಲಕ್ಷಗಳನ್ನು** ಜೈವಿಕ ಇಂಧನ ಚಟುವಟಿಕೆಗಳಿಗಾಗಿ ಮೊದಲನೇ ಹಾಗೂ ಎರಡನೇ ಕಂತಿನ ಅನುದಾನವನ್ನಾಗಿ ಬಿಡುಗಡೆ ಮಾಡಿದೆ.

ಮೇಲೆ (2)ರಲ್ಲಿ ಓದಲಾದಂತೆ ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಬಿಡಿಬಿ ರವರು ಕೋರಿರುವಂತೆ **2015–16ನೇ** ಸಾಲಿನಲ್ಲಿ **ನಾಲ್ಕನೇ ಕಂತಿನ** ಅನುದಾನ **ರೂ.37.50 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2501–04–105–0–03–059 (ಯೋಜನೆ)**ರಡಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ35/ಜೈಅಯೋ/2015, ಬೆಂಗಳೂರು, ದಿನಾಂಕ 15.02.2016

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2015–16ನೇ** ಸಾಲಿನಲಿ ಲೆಕ್ಕ ಶೀರ್ಷಿಕೆ **2501-04-105–0–03–059 (ಯೋಜನೆ)**ರಡಿ **ನಾಲ್ಕನೇ ಕಂತಿನ ಅನುದಾನ ರೂ.37.50 ಲಕ್ಷಗಳನ್ನು (ಮೂವತ್ತೇಳು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)**. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರಿಗೆ ಬಿಡುಗಡೆ ಮಾಡಿದೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರು ಗ್ರಾಂಟ್–ಇನ್–ಏಡ್ ಬಿಲ್ಲುನ್ನು ಸಲ್ಲಿಸಿ, ನಿರ್ದೇಶಕರು (ಗ್ರಾಮೂಸೌ–2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಮೇಲು ರುಜು ಪಡೆದು ಖಜಾನೆಯಿಂದ ಅನುದಾನ ಪಡೆಯತಕ್ಕದ್ದು. ಬಿಡುಗಡೆ ಮಾಡಿದ ಅನುದಾನವನ್ನು ಉದ್ದೇಶಿತ ಯೋಜನೆಗಳಿಗಾಗಿ ಮಾತ್ರ ವಿನಿಯೋಗಿಸಿ, ವೆಚ್ಚದ ವಿವರಗಳನ್ನು ಸರ್ಕಾರಕ್ಕೆ ನಿಗದಿತವಾಗಿ ಸಲ್ಲಿಸುವುದು.

ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ **ಸಂಖ್ಯೆ:** ಗ್ರಾಅಪ/ 76/ಪಿಬಿಎಸ್/2016 ದಿನಾಂಕ06.02.2016ರನ್ವಯ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ :

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು.
3. ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಉಪ ನಿರ್ದೇಶಕರು (ತಾಂತ್ರಿಕ), ರಸ್ತೆ ಮತ್ತು ಸೇತುವೆ ವಿಭಾಗ, ಗ್ರಾ. ಮತ್ತು ಪಂ. ರಾಜ್ ಇಲಾಖೆ.
7. ಉಪ ನಿರ್ದೇಶಕರು, ಟ್ರೆಜರಿ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಜಾಲ, ಗ್ರಾ. ಮತ್ತು ಪಂ. ರಾಜ್ ಇಲಾಖೆ.
9. ರಕ್ಷ ಕಡತಕ್ಕೆ / ಹೆಚ್ಚುವರಿ ಪ್ರತಿ.